# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 511
2. ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
3. ಉತ್ತರಿಸ ಬೇಕಾದ ದಿನಾಂಕ : 14.08.2025
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಕಾಲುವೆ ವ್ಯವಸ್ಥೆಗಳಲ್ಲಿ ನೀರಿನ ಬಳಕೆಯ ಸಾಮರ್ಥ್ಯವು ಸುಮಾರು ಶೇಕಡಾ 30 ರಷ್ಟು ಎಂದು<br><br>ಅಂದಾಜಿಸಲಾಗಿದ್ದು, ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಶೇಕಡಾ 70 ರಷ್ಟು ನೀರು ವ್ಯರ್ಥವಾಗಬಹುದು ಎಂಬುದು ನಿಜವೇ: | ಜಲಸಂಪನ್ಮೂಲ ಇಲಾಖೆಯಡಿಯಲ್ಲಿ ಸಾಂಪ್ರದಾಯಿಕ ಮಾದರಿಯಲ್ಲಿ ತೆರೆದ ಕಾಲುವೆ ಮೂಲಕ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದ್ದು, ನೀರಿನ ಸಾಗಾಣಿಕೆಯಲ್ಲಿ ಉಂಟಾಗುವ ವ್ಯರ್ಥವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾಲುವೆಯ ವಿನ್ಯಾಸಕ್ಕೆ ಅನುಗುಣವಾಗಿ ನೀರಿನ ಬಳಕೆಯ ಸಾಮರ್ಥ್ಯವನ್ನು ಪರಿಗಣಿಸಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಹರಿಸಲಾಗುತ್ತಿದೆ.<br><br>ಈ ತೆರೆದ ಕಾಲುವೆಗಳಲ್ಲಿ ನೀರಿನ ವ್ಯರ್ಥವಾಗುತ್ತಿದ್ದು, ಇಲ್ಲಿ ಬಳಕೆಯ ಸಾಮರ್ಥ್ಯ ಕಡಿಮೆಯಿರುವುದು ನಿಜ.<br><br>ನೀರಿನ ಬಳಕೆಯಲ್ಲಿನ ನಷ್ಟವನ್ನು ಕಡಿಮೆ ಮಾಡಲು ಹಾಗೂ ನೀರಿನ ಸಾಗಾಣಿಕೆ ಮತ್ತು ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಕೈಗೊಂಡ ಹೊಸ ಯೋಜನೆಗಳಲ್ಲಿ ಪೈಪ್‌ಲೈನ್ ಕಾಲುವೆ ಜಾಲವನ್ನು ಅಳವಡಿಸಿಕೊಳ್ಳಲಾಗಿರುತ್ತದೆ, ಹಳೆಯ ಕಾಲುವೆಗಳ Modernisation ಮಾಡಲಾಗುತ್ತಿದೆ, ಎತ್ತರದ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಏತ ನೀರಾವರಿ ಮುಖಾಂತರ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ ಹಾಗೂ ಆಧುನಿಕ SCADA ತಂತ್ರಜ್ಞಾನವನ್ನು ಅಳವಡಿಸಿಕೊಂಡು ನೀರಿನ ಬಳಕೆಯ ಸಾಮರ್ಥ್ಯವನ್ನು ಉತ್ತಮಗೊಳಿಸಲಾಗಿದೆ. |
| ಆ) | ನೀರಾವರಿ ಸಾಮರ್ಥ್ಯವನ್ನು ಸೃಜಿಸಲು 2009 ರಿಂದ ಸರ್ಕಾರಿ ವೆಚ್ಚವನ್ನು ಹೆಚ್ಚಿಸಿದ್ದಾಗ್ಯೂ. ವಾಸ್ತವಿಕ ನೀರಾವರಿ ಪ್ರದೇಶವು ವಿಸ್ತರಣೆಯಾಗದೆ ಸ್ಥಗಿತಗೊಂಡಿದೆ ಎಂಬುದು ನಿಜವೇ; ಸುಮಾರು 31 ಲಕ್ಷ ಹೆಕ್ಟೇರ್ ಸಾಮರ್ಥ್ಯವನ್ನು ಸೃಜಿಸಲಾಗಿದೆಯಾದರೂ. ಸುಮಾರು 16.4 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಮಾತ್ರ ಭಾರಿ ಮತ್ತು ಮಧ್ಯ ನೀರಾವರಿ ಯೋಜನೆಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದು ನಿಜವೇ; | ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ(UKP) ಮತ್ತು ಕಾವೇರಿ ಕಣಿವೆ ಪ್ರದೇಶದಲ್ಲಿನ ನೀರಾವರಿ ಕ್ಷೇತ್ರವು Tribunal Award ಗಳ allocation ಗೆ ಒಳಪಟ್ಟಿವೆ. ಈ KWDT-II Award ಅನ್ನು ಕೇಂದ್ರ ಸರ್ಕಾರದಿಂದ Gazette Notification ಮಾಡದೇ ಇರುವುದರಿಂದ, ಪ್ರಮುಖವಾಗಿ UKP, Stage -III ಗೆ ಸಂಬಂಧಿಸಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಿದ್ದರೂ ಸಹ ಸಂಪೂರ್ಣವಾಗಿ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.<br><br>ಜಲಸಂಪನ್ಮೂಲ ಇಲಾಖೆಯಡಿಯ ನಿಗಮಗಳು ಹಾಗೂ ನಿರ್ದೇಶನಾಲಯದಡಿ ಬರುವ ಯೋಜನೆಗಳಲ್ಲಿ ಮಾರ್ಚ್-2025ರ ವರೆಗೆ ಒಟ್ಟು ಯೋಜಿತ ನೀರಾವರಿ ಕ್ಷೇತ್ರ 4208182 ಹೆಕ್ಟೇರುಗಳು ಹಾಗೂ ಸೃಜಿಸಲಾದ ಒಟ್ಟು ನೀರಾವರಿ ಕ್ಷೇತ್ರ 3020728 ಹೆಕ್ಟೇರುಗಳು.<br><br>ರಾಜ್ಯದಲ್ಲಿನ ಬಹುತೇಕ ನೀರಾವರಿ ಪ್ರದೇಶವು ಹರಿ ನೀರಾವರಿ ಮುಖಾಂತರ ನೀರನ್ನು ಒದಗಿಸಲಾಗುತ್ತಿರುವುದರಿಂದ ಈ ಹರಿ ನೀರಾವರಿ ಯೋಜನೆಗಳಲ್ಲಿ ನೀರಾವರಿ ಬಳಕೆ ಸಾಮರ್ಥ್ಯವು ಕಡಿಮೆಯಿರುವುದರಿಂದ ಯೋಜಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತಿಲ್ಲ.<br><br>ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗಾಗಿ ರಚಿಸಲಾಗಿರುವ 6 ಕಾಡಾ ಪ್ರಾಧಿಕಾರಗಳ ಪಾತ್ರ ಕೆಳಗಿನಂತಿದೆ; |

| | | |
|---|---|---|
| | ಈ ಸಂದರ್ಭದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಸಿಎಡಿಎ)ದ ಪಾತ್ರವೇನು? ಇದನ್ನು ಸ್ಥಾಪಿಸಲಾಗಿರುವ ಉದ್ದೇಶವನ್ನು ಯಶಸ್ವಿಯಾಗಿ ಪೂರೈಸಲಾಗಿದೆಯೇ: | ಅಚ್ಚುಕಟ್ಟು ಪ್ರದೇಶದಡಿಯ ಸವಳು-ಜವಳು ನಿರ್ಮೂಲನೆ, ಹೊಲಬಸಿಗಾಲುವೆ ನಿರ್ಮಾಣ, ಅಚ್ಚುಕಟ್ಟು ರಸ್ತೆಗಳ ನಿರ್ಮಾಣ, ನೀರು ಬಳಕೆದಾರರ ಸಹಕಾರ ಸಂಘಗಳ ರಚನೆ ಹಾಗೂ ರೈತರಿಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br><br>ರೈತರಿಗೆ ನೀಡುವ ತರಬೇತಿಯಲ್ಲಿ ಸೂಕ್ತ ನೀರಾವರಿ ಪದ್ಧತಿಗಳನ್ನು ಪ್ರೋತ್ಸಾಹಿಸುವ ಮೂಲಕ, ನೀರಿನ ವ್ಯರ್ಥವನ್ನು ಕಡಿಮೆ ಮಾಡುವ ಮೂಲಕ ಮತ್ತು ಪರಿಮಾಣದ ಆಧಾರದ ಮೇಲೆ ಎಲ್ಲರಿಗೂ ನೀರಿಗೆ ಸಮಾನ ಪ್ರವೇಶವನ್ನು ಖಾತ್ರಿಪಡಿಸುವ ಮೂಲಕ ಸುಸ್ಥಿರ ನೀರಿನ ಬಳಕೆಯನ್ನು ಉತ್ತೇಜಿಸುವ ಕಾರ್ಯಗಳೊಂದಿಗೆ ಕಾಡಾ ಪ್ರಾಧಿಕಾರಗಳು ರೈತರ ಶ್ರೇಯೋಭಿವೃದ್ಧಿಗೆ ಮುಖ್ಯ ಪಾತ್ರವಹಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುತ್ತವೆ. |
| ಇ) | ಕಾಲುವೆ ನೀರಾವರಿಗೆ ತೋರುತ್ತಿರುವ ನಿರುತ್ಸಾಹದಿಂದಾಗಿ ಕೊಳವೆ ಬಾವಿಗಳ ಮೂಲಕ ಅಂತರ್ಜಲದ ಮೇಲಿನ ಅವಲಂಬನೆಯು ತೀವ್ರತರವಾಗಿ ಹೆಚ್ಚಾಗಿದ್ದು. ರಾಜ್ಯದ ನೀರಾವರಿ ಪ್ರದೇಶವು ಸುಮಾರು ಶೇ.60 ರಷ್ಟು ಅವಲಂಬನೆಯಾಗಿದ್ದು, ಸಾಕಷ್ಟು ಅಂತರ್ಜಲ ಮರು ಪೂರಣ ಮಾಡದೆ ಅಥವಾ ನಿಯಂತ್ರಣವಿಲ್ಲದೆ, ಸುಸ್ಥಿರವಲ್ಲದ ರೀತಿಯಲ್ಲಿ ನೀರಿನ ಹೊರತೆಗೆಯುವಿಕೆಯಿಂದಾಗಿ ಅಂತರ್ಜಲ ಮಟ್ಟಗಳು ಆತಂಕಕಾರಿಯಾಗಿ ಕುಸಿಯುತ್ತಿದ್ದು. ಇದನ್ನು ನಿವಾರಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ? | ರೈತರು ಕೊಳವೆಬಾವಿಗಳ ಮೇಲೆ ಅವಲಂಬನೆಯಾಗಿರುವುದರಿಂದ ಅಂತರ್ಜಲ ಮಟ್ಟವು ಕುಸಿಯುತ್ತಿದ್ದು, ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿನ ನಿಗಮಗಳಡಿ ಅಚ್ಚುಕಟ್ಟು ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು Lift Irrigation ಮೂಲಕ Tank Filling ನಲ್ಲಿ ತೆಗೆದುಕೊಳ್ಳಲಾಗಿದ್ದು ಇದರಿಂದಾಗಿ ಕೆರೆಗಳ ಸುತ್ತಮುತ್ತಲಿನ ಅಂತರ್ಜಲ ಮಟ್ಟವನ್ನು ಗಣನೀಯವಾಗಿ ಹೆಚ್ಚಿಸಲು ಕ್ರಮ ವಹಿಸಿದಂತಾಗಿರುತ್ತದೆ. |

**ಸಂಖ್ಯೆ: ಜಸಂಇ:126:ಸಿಎಎಂ:2025**

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**